ಶ್ರೀ ಎಂ. ಚಂದ್ರಶೇಖರ್.—ಕಳೆದ ಅಧಿವೇಶನದಲ್ಲಿ ನಾವು ಈ ಒಂದು ವಿಚಾರವನ್ನು ಎತ್ತಿದಾಗ ಮಾನ್ಯ ಮುಖ್ಯಮಂತ್ರಿಗಳು ಸಹಾನುಭೂತಿ ತೋರಿಸಿ ಇದನ್ನು ಪರಿಶೀಲನೆ ಮಾಡುತ್ತೇನೆಂದು ಆಶ್ವಾಸನೆ ಕೊಟ್ಟಿದ್ದಾರೆ. ಅವರು ಕೊಟ್ಟ ಆಶ್ವಾಸನೆ ರಿಕಾರ್ಡ್‌ನಲ್ಲಿದೆ. ದಯವಿಟ್ಟು ಈಗ ಹೇಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಹಾಗೂ ಈ ವಿಚಾರದಲ್ಲಿ ತಾವು ಪರಿಶೀಲಿಸಿ ಈಗ ಒಂದು ಭರವಸೆಯನ್ನು ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಫೈಲುಗಳನ್ನು ನೋಡುತ್ತಾ ಇದ್ದಾರೆ. ದಯವಿಟ್ಟು ಇತ್ತಕಡೆ ಸ್ವಲ್ಪ ಗಮನಹರಿಸಬೇಕು ಎಂದು ಕೇಳುತ್ತೇನೆ. ಹೋದ ಅಧಿವೇಶನದಲ್ಲಿ ನಾನೂ ಕೂಡ ಇದರ ಬಗ್ಗೆ ಹೇಳಿದಾಗ ತಾವು ಭರವಸೆ ಕೊಟ್ಟಿದ್ದೀರಿ ದಯವಮಾಡಿ ಇದರ ಬಗ್ಗೆ ತಮ್ಮ ಆಶ್ವಾಸನೆ ಏನು ಅನ್ನುವುದನ್ನು ಹೇಳಿದರೆ ಒಳ್ಳೆಯದಾಗುತ್ತದೆ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಕಂದಾಯ ಮಂತ್ರಿಗಳು ಪರಿಶೀಲನೆ ಮಾಡುತ್ತಿದ್ದೇವೆ ಎಂದು ಹೇಳಿದ್ದಾರಲ್ಲಾ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಕೊನೆಯ ಅಧಿವೇಶನವಾದುದರಿಂದ ಇದು ಅವರಿಗೆ ಒಂದು ಕೊನೆಯ ಕೊಡುಗೆಯಾಗುತ್ತದೆ. ಆದುದರಿಂದ ಈ ಸಂಜೆಯೊಳಗಾದರೂ ಕೂಡ ಹೇಳುತ್ತಾರೆಯೇ ?

(ಉತ್ತರವಿಲ್ಲ)

SRI QUMARUL ISLAM.—Sir, I have raised a point regarding declaring 'General Holiday' for Id-Meelad. I request the Hon'ble Chief Minister to make an announcement on this.

(ಉತ್ತರವಿಲ್ಲ)

CALLING ATTENTION TO MATTERS OF URGENT PUBLIC IMPORTANCE

(i) *Neg. Maintenance of Rani Kittur Channammo Sainik School.*

SRI S. S. ARAKERI.—Sir, I call the attention of the Minister for Education to the paucity of funds for the maintenance of Rani Kittur Chennamma Sainik School.

SMT. NAGAMMA C. KESHAVAMURTHY (Minister for Primary and Secondary Education)—Sir, I wish to make the following statement.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—(ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು) ಕಿತ್ತೂರ ರಾಣಿ ಚೆನ್ನಮ್ಮ ಬಾಲಿಕಾ ನಿವಾಸಿ ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಸಧ್ಯಕ್ಕೆ ತಲಾ ರೂ. ೨,೫೦೦-೦೦ ಮೊಬಲಗಿನ ವಾರ್ಷಿಕ ವಿದ್ಯಾರ್ಥಿ ವೇತನವನ್ನು ಸರ್ಕಾರದ ಮಂಜೂರಾತಿ ಆಜ್ಞೆ ಸಂಖ್ಯೆ: ಇಡಿ; ೧೬೧ ಎಂ. ಹೆಚ್. ಎಸ್. ೭೭ ತಾರೀಖು ೩೦-೩-೧೯೭೮ರ ಮೇರೆಗೆ ನೀಡಲಾಗುತ್ತಿದೆ. ಕಾಲ ಕ್ರಮೇಣ ಜೀವನ ವೆಚ್ಚ ಹೆಚ್ಚಾಗುತ್ತಿರುವುದರಿಂದ ಈ ವಿದ್ಯಾರ್ಥಿ ವೇತನವು ಸಾಲದೆಂದು ಆರ್ಥಿಕ ತೊಂದರೆಗಳನ್ನು ವಿವರವಾಗಿ ನಿವೇದಿಸಿ, ತಲಾ ವಾರ್ಷಿಕ ವಿದ್ಯಾರ್ಥಿ ವೇತನವನ್ನು ಸೈನಿಕ್ ಸ್ಕೂಲ್, ವಿಜಾಪುರ ವಿದ್ಯಾರ್ಥಿ ವೇತನಕ್ಕೆ ಸರಿಸಮವಾಗಿ ರೂ. ೩,೫೦೦-೦೦ ಕ್ಕೆ ಹೆಚ್ಚಿಸಬೇಕೆಂದು ಕೋರಿ ಸರ್ಕಾರಕ್ಕೆ ೨೮-೯-೧೯೮೧ ರಂದು ಶಾಲಾ ಪ್ರಾಚಾರ್ಯರು ಮನವಿಯನ್ನು ಸಲ್ಲಿಸಿರುವರು. ಇದರ ಮೇರೆಗೆ ಸರ್ಕಾರದ ಸೂಚನೆ ಮೇರೆಗೆ ಆಯುಕ್ತ, ಕಚೇರಿ ಅಧಿಕಾರಿಗಳು ಶಾಲೆಗೆ ಸಂದರ್ಶಿಸಿ, ಈ ವಿಚಾರದಲ್ಲಿ ಸರ್ಕಾರಕ್ಕೆ ಈ ಕಛೇರಿ ಪತ್ರ ಸಂಖ್ಯೆ ಇಷ(೨)ಇತರೆ-೧/೮೨-೮೩ ತಾರೀಖು: ೫/೧೪-೬-೮೨ ರಲ್ಲಿ ವರದಿ ಮಾಡುತ್ತಾ ತಲಾ ವಾರ್ಷಿಕ ವಿದ್ಯಾರ್ಥಿ ವೇತನವನ್ನು ಪೂರ್ವಾನ್ವಯದಿಂದ ಅಂದರೆ ೧-೪-೧೯೮೨ ರಿಂದ ಶಾಲೆಯ ಎಲ್ಲಾ ಆರ್ಥಿಕ ತೊಂದರೆಯನ್ನು ನಿವಾರಿಸುವ ಸಲುವಾಗಿ ರೂ. ೨,೫೦೦-೦೦ ರಿಂದ ೩,೫೦೦-೦೦ ರೂಪಾಯಿಗಳ ಮೊಬಲಗಿಗೆ ಹೆಚ್ಚಿಸಲು ಕೋರಿ ಸವಿಸ್ತಾರ

ಪ್ರಸ್ತಾಪ ಸಲ್ಲಿಸಿರುತ್ತದೆ. ಈ ಪ್ರಸ್ತಾಪವು ಸರ್ಕಾರದ ಮುಂದೆ ಪರಿಶೀಲನೆಯಲ್ಲಿದೆ.

ಈ ಮಂಧ್ಯೆ, ಚಾಲ್ತಿ ಸಾಲಿಗೆ ಸಧ್ಯಕ್ಕೆ ಸರ್ಕಾರ ನೀಡಂತ್ತಿರುವಂತೆ ವಿದ್ಯಾರ್ಥಿ ವೇತನ ೨,೫೦೦-೦೦ ಪ್ರಕಾರ ಒಟ್ಟು ಮೊಬಲಗು ೮,೫೦,೦೦೦-೦೦ ರೂಪಾಯಿಗಳನ್ನು ಈ ಕಚೇರಿ ಜ್ಞಾಪನ ಸಂಖ್ಯೆ; ಇ ೭ (ಎ) ಇತರೆ -೨೨/೮೨-೮೩ ತಾರೀಖು ೨೨/ ೨೮-೯-೧೯೮೨ ರಲ್ಲಿ ಬಿಡುಗಡೆ ಮಾಡಿ. ಇದಕ್ಕೆ ಸಂಬಂಧಿಸಿದ ಬಿಲ್ಲನ್ನು ಕೂಡಲೆ ತಯಾರಿಸಿ, ವಿಳಂಬ ಮಾಡದೆ ಸಂದಾಯ ಮಾಡಲು ಅವಶ್ಯ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟ ವಿಭಾಗ ಮತ್ತು ಜಿಲ್ಲಾ ಇಲಾಖಾ ಅಧಿಕಾರಿಗಳಿಗೆ ಆದೇಶ ನೀಡಿರುತ್ತದೆ.

ಶ್ರೀ ಎಸ್. ಎಸ್. ಆರಕೇರಿ.— ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರ ಈಗ ೩೫೦೦ ರೂಪಾಯಿಗಳನ್ನು ಪ್ರತಿ ವಿದ್ಯಾರ್ಥಿನಿಗೂ ಕೊಡಬೇಕು ಎಂದು ನಿರ್ಣಯ ಮಾಡಿರುವುದು ಅಭಿನಂದನೀಯ. ಆದರೆ ಈ ಹಣವನ್ನು ನಾಲ್ಕು ದು ತಿಂಗಳಾದರೂ ಕೂಡ ಕೊಡದೆ ಇನ್ನೂ ಪರಿಶೀಲನೆಯಲ್ಲಿಟ್ಟಿರುವುದು ನಿಜವಾಗಿಯೂ ಸಹ ನವಂಗೆ ಸಮಾಧಾನ ತರುವಂಥಾದ್ದಲ್ಲ. ಸರ್ಕಾರದವರು ಕೂಡಲೇ ೩೫೦೦-೩೬೦೦ ರೂಪಾಯಿಗಳನ್ನು ಅವರಿಗೆ ಕೊಡುವಂತೆ ಮಾಡಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಎರಡನೆಯದಾಗಿ, ಕಿತ್ತೂರು ರಾಣಿ ಚೆನ್ನಮ್ಮ ರೆಸಿಡೆನ್ಷಿಯಲ್ ಸ್ಕೂಲಿನ ಕ್ಯಾಂಪಸ್ ನೋಡಿದಾಗ, ಗುಡ್ಡದಲ್ಲಿರುವಂಥ ಈ ಶಾಲೆಗೆ ಯಾವ ರೀತಿಯಾದ ಪ್ರೊಟೆಕ್ಷನ್ ಸಹ ಇಲ್ಲ. ಅಲ್ಲಿ ಹೆಣ್ಣು ಮಕ್ಕಳಿಗೆ ಭಯಾನಕವಾದ ಪರಿಸ್ಥಿತಿ ಇದೆ. ಯಾರು ಯಾವಾಗ ಏನು ಮಾಡಿದರೂ ಸಹ ಕೇಳುವವರು ಇಲ್ಲವಾಗಿದೆ. ಸ್ಕೂಲಿನ ಸುತ್ತ ಮುಂತ್ತ ಗೋಡೆಗಳು ಇಲ್ಲದೆ ಮಕ್ಕಳಿಗೆ ಸರಿಯಾದ ಪ್ರೊಟೆಕ್ಷನ್ ಇಲ್ಲವಾಗಿದೆ. ಸರ್ಕಾರದವರು ಕೂಡಲೇ ಈ ಸ್ಕೂಲಿಗೆ ಪ್ರೊಟೆಕ್ಷನ್ ವಾಲ್‌ನ್ನು ಕಟ್ಟಿಸುವಂಥ ವ್ಯವಸ್ಥೆ ಮಾಡಬೇಕು. ಮತ್ತು ಈ ೩೬೦೦ ರೂಪಾಯಿಗಳನ್ನು ಮಕ್ಕಳಿಗೆ ಕೂಡುವಂಥಾದ್ದು ಏನು ಇದೆ ಅದನ್ನು ಕೂಡಲೇ ಕೊಡಬೇಕು ಹಾಗೂ ಇದರ ಬಗ್ಗೆ ಮಾನ್ಯ ಸಚಿವೆಯವರು ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಆಶ್ವಾಸನೆಯನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.— ನಾನು ಈಗಾಗಲೇ ತಿಳಿಸಿದ ಹಾಗೆ ಅಲ್ಲಿಯ ವಿದ್ಯಾರ್ಥಿನಿಯರಿಗೆ ೩೫೦೦ ರೂಪಾಯಿಗಳನ್ನು ವರ್ಷಕ್ಕೆ ಕೊಡುವ ಒಂದು ವಿಚಾರ ಸರ್ಕಾರದ ಮುಂದೆ ಇದೆ. ಇದರ ಬಗ್ಗೆ ನಾವು ಆದಷ್ಟು ಬೇಗ ತೀರ್ಮಾನ ತೆಗೆದು ಕೊಳ್ಳುತ್ತೇವೆ. ಮತ್ತೆ ಈ ಶಾಲೆಯ ಸುತ್ತ ಮುತ್ತ ಗೋಡೆಯನ್ನು ಕಟ್ಟುವ ವಿಷಯದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪಮಾಡಿದ್ದಾರೆ. ಇದರ ಬಗ್ಗೆಯೂ ಸಹ ನಾವು ಈ ಶಾಲೆಗೆ ಸಂಬಂಧಪಟ್ಟವರಿಂದ ಎಸ್ಟಿಮೇಟ್ಸ್‌ಗಳನ್ನು ತರಿಸಿಕೊಂಡು ಶೀಘ್ರವಾಗಿ ನಾವು ಪರಿಶೀಲನೆ ಮಾಡಬೇಕಾಗುತ್ತದೆ.

ಡಾ. ಎಚ್. ಎಲ್. ತಿಮ್ಮೇಗೌಡ.— ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ವಿಜಾಪುರದ ಸೈನಿಕ ಶಾಲೆಯಂ ಮಾದರಿಯಲ್ಲಿ ಮಹಿಳಾ ಸೈನಿಕ ಶಾಲೆ ಒಂದು ಇರುವುದು ಎಂದರೆ, ಈ ಕಿತ್ತೂರು ರಾಣಿ ಚೆನ್ನಮ್ಮ ಶಾಲೆ ವಿಜಾಪುರದ ಸೈನಿಕ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಅಲ್ಲಿ ೬೦ ಪರ್ಸೆಂಟ್ ಮಂಕ್ಕಳಿಗೆ ಮೆರಿಟ್ ಸ್ಕಾಲರ್‌ಷಿಪ್ ಮತ್ತು ಮಿಕ್ಕವರಿಗೆ ಸ್ಕಾಲರ್‌ಷಿಪ್ ಕೊಡುತ್ತಿದ್ದಾರೆ ಅದೇ ರೀತಿಯಲ್ಲಿ ಕಿತ್ತೂರುರಾಣಿ ಚೆನ್ನಮ್ಮ ಸ್ಕೂಲನ್ನು ಡೆವಲಪ್ ಮಾಡುವಂಥಾ ಅವಶ್ಯಕತೆ ಇದೆ. ಈ ದೃಷ್ಟಿಯಿಂದ ಒಬ್ಬ ವಿದ್ಯಾರ್ಥಿನಿಗೆ ೩೫೦೦ ರೂಪಾಯಿಗಳನ್ನು ಅಲ್ಲಿ ಒಂದು ವರ್ಷಕ್ಕೆ ಕೊಡುವಂತೆ ಶಿಫಾರಸ್ ಮಾಡಿರುವುದು ಸೂಕ್ತವಾಗಿದೆ. ಇದನ್ನೂ ಸಹ ವಿಜಾಪುರ ಸೈನಿಕ ಸೂಲಿನ ಮಾದರಿಯಲ್ಲಿ ಡೆವಲಪ್ ಮಾಡಿ ನಮ್ಮ ಹೆಣ್ಣು ಮಂಕ್ಕಳಿಗೆ ಅನುಕೂಲ ಮಾಡಿಕೊಡಬೇಕು. ಅಲ್ಲದೆ ಈ ಶಾಲೆಯ ಕ್ಯಾಂಪಸ್‌ಗೆ ಸುತ್ತ ಮುಂತ್ತ ಕಾಂಪೌಂಡ್ ವಾಲ್ ಕಟ್ಟುವುದು ಅವಶ್ಯಕತೆ ಇದೆ. ಇಲ್ಲದಿದ್ದರೆ ಮಾನ್ಯ ಸದಸ್ಯರಾದ ಆರಕೇರಿಯವರು ಹೇಳಿದ ಹಾಗೆ, ಭಯಾನಕವಾದ ವಾತಾವರಣದಲ್ಲಿ ಈ ಮಕ್ಕಳು ಇರಬೇಕಾಗುತ್ತದೆ. ಭಾರತದೇಶದಲ್ಲಿಯೇ ಇದೊಂದು ಮಾದರಿಯಾದ ಮಹಿಳಾ ಶಾಲೆ. ಇದಕ್ಕೆ ಯಾವ ಯಾವ ಸವಲತ್ತು ಬೇಕೋ ಅವುಗಳನ್ನು ಕೊಟ್ಟು ಇದರಿಂದ ಹೆಚ್ಚಿನ ರೀತಿಯಲ್ಲಿ ನಮ್ಮ ರಾಜ್ಯದ ಹೆಣ್ಣುಮಕ್ಕಳಿಗೆ ಅನುಕೂಲ ಮಾಡಬೇಕಾದುದು ತಮ್ಮ ಕರ್ತವ್ಯವಾಗಿದೆ. ತಾವು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಾಗಿರುವುದರಿಂದ ದಯವಿಟ್ಟು ತೀವ್ರಗತಿಯಲ್ಲಿ ಕ್ಯಾಂಪಸ್‌ನ ಗೋಡೆಯನ್ನು ಕಟ್ಟಿ ಅಲ್ಲಿಯ ಮಕ್ಕಳಿಗೆ ಅನುಕೂಲ ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಬಿಜಾಪುರದ ಸೈನಿಕ ಶಾಲೆಯನ್ನು ಯಾವರೀತಿಯಲ್ಲಿ ಸರ್ಕಾರದವರು ಬೆಳೆಸುತ್ತಿದ್ದಾರೋ ಅದೇರೀತಿಯಲ್ಲಿ ಇದನ್ನೂ ಬೆಳೆಸಬೇಕು ಎನ್ನುವ ತೀರ್ಮಾನವನ್ನು ತಾವು ಜಾಗ್ರತೆ ತೆಗೆದು ಕೊಳ್ಳಬೇಕು.

ಶ್ರೀ ಎಂ. ಮಲ್ಲಾರಿಗೌಡ ಪಾಟೀಲ್.— ಮಾನ್ಯ ಸಚಿವೆಯವರು ಹೇಳಿದ ಮಾತನ್ನು ಕೇಳಿ ನನಗೆ ಸಂತೋಷವಾಯಿತು. ಇಡೀ ನಮ್ಮ ರಾಜ್ಯದಲ್ಲಿ ಹೆಣ್ಣುಮಕ್ಕಳ ಸೈನಿಕ ಶಾಲೆ ಇರುವುದು ಇದೊಂದೇ. ಕಿತ್ತೂರಿನ ರಾಣಿ ಚೆನ್ನಮ್ಮನವರು ಯಾವ ರೀತಿ ಹೋರಾಡಿದರೋ ಅದರ ಒಂದು ನೆನಪಿಗಾಗಿ ಈ ಶಾಲೆಯನ್ನು ಆಲ್ಲಿ ಪ್ರಾರಂಭಮಾಡಿದ್ದಾರೆ. ಆದರೆ ಆ ಶಾಲೆಯ ಪರಿಸ್ಥಿತಿಯನ್ನು ನೋಡಿದರೆ ಗಂಭೀರವಾಗಿದೆ. ಏಕೆಂದರೆ, ಶಾಲೆಯನ್ನು ಗುಡ್ಡದಲ್ಲಿ ಕಟ್ಟಿದ್ದಾರೆ, ಅದಕ್ಕೆ ಯಾವ ರೀತಿಯಾದ ಪ್ರೊಟೆಕ್ಷನ್ಸ್ ಇಲ್ಲವಾಗಿದೆ. ಶಾಲೆಯ ಸುತ್ತ ಮುತ್ತ ಕಾಂಪೌಂಡ್ ಗೋಡೆಯ ಅವಶ್ಯಕತೆ ಇದ್ದು ಇನ್ನೂವರೆಗೂ ಅದನ್ನು ಮಾಡಿಲ್ಲ. ದಕ್ಷಿಣ ಭಾಗದಲ್ಲಿ ಮಹಿಳಾ ಸೈನಿಕ ಶಾಲೆಯಿರುವುದು ಇದೊಂದೇ ಇದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಮಾಡಿ ತಮ್ಮಲ್ಲಿ ಕಾಲದಲ್ಲಿ ಈ ಶಾಲೆ ಬಿಜಾಪುರ ಸೈನಿಕ ಶಾಲೆಯು ಮಾದರಿಯಾಗುವಂತೆ ತಾವು ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈಗ ವಿದ್ಯಾರ್ಥಿನಿಯರಿಗೆ ವರ್ಷಕ್ಕೆ ೩೫೦೦ ರೂಪಾಯಿಗಳನ್ನು ಕೊಡುವಂಥ ವ್ಯವಸ್ಥೆ ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಹೇಳಿದ್ದೀರಿ. ಇದಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಈ ಹಣವನ್ನು ಇನ್ನೂ ಹೆಚ್ಚು ಮಾಡಲಿಕ್ಕೆ ಸಾಧ್ಯವೇ ಎಂದು ನೋಡಿ ಅವರಿಗೆ ಅನುಕೂಲ ಮಾಡಿಕೊಡಬೇಕು ಎಂದು ನಾನುತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಅಲ್ಲಿರುವ ಮಕ್ಕಳಲ್ಲಿ ಬಡ ಜನಾಂಗದವರು ಎಷ್ಟು ಜನರಿದ್ದಾರೆ ಶ್ರೀಮಂತರು ಎಷ್ಟು ಜನರು ಇದ್ದಾರೆ ಎನ್ನುವುದನ್ನು ತಾವು ನೋಡಬೇಕು. ಆವಷ್ಟು ಮಟ್ಟಿಗೆ ಇಲ್ಲಿ ಬಡಮಕ್ಕಳಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡುವಂಥ ವ್ಯವಸ್ಥೆಯನ್ನು ತಾವು ಮಾಡಬೇಕು. ಇದೊಂದು ಕಲ್ಯಾಣಕರವಾದ ಕೆಲಸವೆಂದು ತಿಳಿದು ಈ ಶಾಲೆಯು ಮಕ್ಕಳಿಗೆ ೩೫೦೦ ರೂಪಾಯಿಗಳನ್ನು ಕೊಡುವಂಥ ಯೋಜನೆ ಏನು ಇದೆ ಅದನ್ನು ಅತಿ ಜಾಗ್ರತೆಯಾಗಿ ಕೊಡುವುದಕ್ಕೆ ತಾವು ಮನಸ್ಸು ಮಾಡಿ ಇದರ ಬಗ್ಗೆ ನಮಗೆ ಸೂಕ್ತ ಭರವಸೆಯನ್ನು ಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರಿಮತಿ ನಾಗಮ್ಮ ಸಿ. ಕೇಶವಮೂರ್ತಿ.— ಬಿಜಾಪುರದ ಸೈನಿಕ ಶಾಲೆ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ರೆಸಿಡೆನ್ಸಿಯಲ್ ಶಾಲೆ ಈ ಎರಡನ್ನೂ ಸೈನಿಕ ಶಾಲೆಯೆಂದು ಭೋಧಿಸಿದರೂ ಕೂಡ ಬಿಜಾಪುರದಲ್ಲಿ ಮಕ್ಕಳಿಗೆ ಡಿಫೆನ್ಸ್ ಸರ್ವೀಸ್ ತರಬೇತಿಯನ್ನು ಕೊಡತಕ್ಕದ್ದು ಮತ್ತು ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯಲ್ಲಿ ಹೆಚ್ಚಿನ ರೀತಿಯಲ್ಲಿ ಹೆಣ್ಣುಮಕ್ಕಳಿಗೆ ಡಿಸಿಪ್ಲಿನ್ ಹಾಗೂ ಉತ್ತಮ ನೀತಿಯನ್ನು ಕಲಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಈ ಎರಡು ಶಾಲೆಗಳಿಗೆ ಇರತಕ್ಕ ಮೂಲಭೂತವಾದ ವ್ಯತ್ಯಾಸ ಇಷ್ಟೆ. ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯಲ್ಲಿ ಬೇರೆ ಬೇರೆ ಸವಲತ್ತುಗಳನ್ನು ಕೊಡಬೇಕೆಂ ಎನ್ನುವ ವಿಷಯವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಮಾತನ್ನು ನಾನು ಪೂರ್ಣವಾಗಿ ಒಪ್ಪುತ್ತೇನೆ. ಆದರೆ ಈ ಸವಲತ್ತುಗಳನ್ನು ಕೊಡುವಾಗ ಫೆನಾನ್ಸಿಯಲ್ ಇಂಪ್ಲಿಕೇಷನ್ಸ್ ಏನು ಎಂದು ನೋಡಿದಾಗ, ನಾವು ಎಲ್ಲಾ ಸವಲತ್ತುಗಳನ್ನು ಒಂದೇ ಬಾರಿಗೆ ಕೊಡಲಿಕ್ಕಾಗುವುದಿಲ್ಲ. ಹಂತ ಹಂತವಾಗಿ ಆದ್ಯತೆ ಕೊಟ್ಟು ಮಾಡುವುದಕ್ಕೆ ಸಾಧ್ಯವಿದೆ. ಮೊದಲು ಸ್ಟಾಫ್ ಕ್ವಾರ್ಟರ್‌ಗಳನ್ನು ಕಟ್ಟುವುದಾಗಲೀ, ಶಾಲೆಯ ಸುತ್ತ ಕಾಂಪೌಂಡ್ ಗೋಡೆಯನ್ನು ಕಟ್ಟುವುದಾಗಲೀ ಹಂತ ಹಂತವಾಗಿ ತೆಗೆದುಕೊಳ್ಳಬೇಕಾತ್ತದೆ. ಇಲ್ಲಿ ಬಡ ಮಕ್ಕಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನನಗೆ ತಿಳಿದ ಮಟ್ಟಿಗೆ ಆಲ್ಲಿ ಪ್ರವೇಶಕ್ಕೆ ಮುನ್ನವೇ ಒಂದು ಎಂಟ್ರೆನ್ಸ್ ಎಕ್ಸಾಮಿನೇಷನ್ ಎಂದು ಮಾಡುತ್ತಾರೆ. ಇದರಲ್ಲಿ ಯಾವ ವಿದ್ಯಾರ್ಥಿಗಳು ಪಾಸಾಗುತ್ತಾರೋ ಅವರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದ್ದೇ ಇದೆ ಆದರೆ ವಿದ್ಯಾರ್ಥಿನಿಯರು ಬಡವರು ಎನ್ನುವ ಕಾರಣದಿಂದ ಪ್ರವೇಶ ಆಲ್ಲಿ ಸಿಕ್ಕುವುದು ಕಷ್ಟ. ಈ ಪ್ರವೇಶ ಪರೀಕ್ಷೆಯಲ್ಲಿ ಪಾಸಾಗಿರತಕ್ಕ ಎಲ್ಲಾ ಮಕ್ಕಳಿಗೂ ಇಲ್ಲಿ ಪ್ರವೇಶ ಸಿಕ್ಕುತ್ತದೆ.

(ii) Reg. : Publication of objectionable matter in Hosahuttu Kannada Monthly.

SRI QUMARUL ISLAM.— I call the attention of the Chief Minister to the publication of objectionable matter in Hosahuttu Kannada Monthly of October 1982 published from Hassan.

SRI R. GUNDU RAO (Chief Minister).—I wish to make the following statement.—